ತಮ್ಮ ಮುಂದೆ ಇಡುತ್ತಿದ್ದೇನೆ. ಇನ್ನು ಕಂಬಾಲಪಲ್ಲಿ ಘಟನೆಗೆ ಸಂಬಂಧಪಟ್ಟಂತೆ ಚರ್ಚೆಯ ಸಂದರ್ಭದಲ್ಲಿ ಹಲವಾರು ಮಾತುಗಳು ಕಠಿಣವಾಗಿ ಹೊರಬಂದಿವೆ. ಅದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಏಕೆಂದರೆ ಘಟನೆ ಆ ರೀತಿಯಲ್ಲಿ ನಡೆದಿದೆ. ಇದು ಬಹಳ ದುಗುಡ ತರತಕ್ಕಂಥ ಬೆಳವಣಿಗೆಯಲ್ಲಿ ನಡೆದಿದೆ. ಆದುದರಿಂದ ಪ್ರತಿಯೊಬ್ಬರು ಕೂಡ ಭಾವನಾತ್ಮಕವಾಗಿ ಮಾತನಾಡತಕ್ಕಂಥ ದಾಟಿಯಲ್ಲಿ ಮಾತನಾಡಿದ್ದಾರೆ. ವಿಷಯಕ್ಕೆ ಭಾವನಾತನ್ಮಕವಾಗಿ ರೂಪು ಕೊಟ್ಟಿದ್ದಾರೆ. ನಮಗೆ ಈ ರೀತಿಯ ಚರ್ಚೆಯಿಂದಾಗಿ ಬೇಸರವೇನೂ ಆಗಿಲ್ಲ. ಒಟ್ಟಾರೆಯಾಗಿ ಎಲ್ಲಾ ಸದಸ್ಯರಲ್ಲೂ ನಾನು ಮತ್ತೊಮ್ಮೆ ಅತ್ಯಂತ ವಿನೀತನಾಗಿ ಪ್ರಾರ್ಥನೆ ಮಾಡುವುದೇನೆಂದರೆ ಸಮಾಜದಲ್ಲಿ ಸಾಮರಸ್ಯವನ್ನು ತರುವುದಕ್ಕೆ ನಾವು ಮತ್ತು ನೀವುಗಳೆಲ್ಲಾ ಜೊತೆಯಾಗಿ ಕೆಲಸ ಮಾಡಬೇಕಾಗಿರುವ ಅವಶ್ಯಕತೆ ಇರುವುದರಿಂದ ಇದಕ್ಕೆ ಎಲ್ಲರೂ ಸಹಕಾರ ಕೊಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಕಂಬಾಲಪಲ್ಲಿ ಘಟನೆಗೆ ಸಂಬಂಧಪಟ್ಟಂತೆ ಸರ್ಕಾರದವರು ಸಿ.ಬಿ.ಐ. ತನಿಖೆಗೆ ಕೊಟ್ಟಿರುವುದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇನೆ. ಇನ್ನು ಮಾನ್ಯ ಸಭಾನಾಯಕರು ನನಗೊಂದು ಪತ್ರ ಬರೆದು ಸಹಸ್ರಮಾನದ ಮಾಹಿತಿ ತಂತ್ರಜ್ಞಾನ ನೀತಿಯನ್ನು ಔಪಚಾರಿಕವಾಗಿ ದಿನಾಂಕ 18-03-2000 ರಂದು ಶನಿವಾರ ಮಧ್ಯಾಹ್ನ 1.00 ಗಂಟೆಗೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಘೋಷಿಸುವುದಾಗಿ ತಿಳಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಮೂರು ಅಂಶಗಳ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಈಗ ಸದನದಲ್ಲಿ ಮಂಡಿಸುತ್ತಾರೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಸದಸ್ಯರುಗಳು ಒಪ್ಪಿದರೆ, ನೀತಿಯ ಒಂದು ಕಾಪಿಯನ್ನು ಸದನದ ಮೇಜಿನ ಮೇಲೆ ಮಂಡಿಸುತ್ತೇನೆ.

ಮಾನ್ಯ ಸದಸ್ಯರಿಗೆ ತಿಳಿದಿರುವಂತೆ, ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ ಹಾಗೂ ಭಾರತದ ಸಿಲಿಕಾನ್ ರಾಜ್ಯ ಎಂದು ಕರೆಯಲ್ಪಟ್ಟಿದೆ. ಜೊತೆಗೆ ರಾಜ್ಯದ ರಾಜಧಾನಿ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಪ್ರಚಂಡ ಬೆಳವಣಿಗೆ ತೋರಿಸಿದೆ ಹಾಗೂ ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿಯಾಗಿದೆ.

2. 1997ರಲ್ಲಿ ಮಾಹಿತಿ ತಂತ್ರಜ್ಞಾನ ನೀತಿಯನ್ನು ಘೋಷಿಸಿದ ಪ್ರಥಮ ರಾಜ್ಯ ಕರ್ನಾಟಕ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಬೆಳವಣಿಗೆಯಾಗಲು ಸದರಿ ನೀತಿಯು ಪ್ರಮುಖ ಪ್ರಚೋದನೆಯಾಗಿ ಕಾರ್ಯ ಮಾಡಿದೆ. ಆದಾಗ್ಯೂ ಈ ಕೈಗಾರಿಕೆ ಅತಿ ವೇಗದಲ್ಲಿ ಬೆಳೆಯುತ್ತಿದೆ, ಹಾಗೂ ಈ ವ್ಯವಹಾರದ ಮಾದರಿ ಮತ್ತು ಸ್ವರೂಪ

ತ್ವರಿತಗತಿಯಲ್ಲಿ ವಿಸ್ತಾರವಾಗುತ್ತಿದೆ. ಮಾಹಿತಿ ತಂತ್ರಜ್ಞಾನದಲ್ಲಿ ಅತ್ಯಾಧುನಿಕ ಉತ್ಪನ್ನ ಮತ್ತು ಸೇವೆಗಳನ್ನು ನೀಡುವ ಹೆಚ್ಚು ಹೆಚ್ಚು ಕಂಪನಿಗಳಿಗೆ ಕರ್ನಾಟಕವು ಕೇಂದ್ರವಾಗುತ್ತ ಬರುತ್ತಿದೆ. ಬೆಂಗಳೂರಿಗೆ ಮಾಹಿತಿ ತಂತ್ರಜ್ಞಾನ ವೃತ್ತಿ ಕಾಯಕರುಗಳ ಮೌಲ್ಯ ಸೇರ್ಪಡೆ ಸಹ ಈ ವರ್ಣರಂಜಿತದ ತುತ್ತತುದಿಗೆ ಕರೆದೊಯ್ಯುತ್ತಿದೆ.

3. ಆದುದರಿಂದ ಮಾಹಿತಿ ತಂತ್ರಜ್ಞಾನ ನೀತಿಯ ಮೇಲೆ ಮತ್ತೆ ಕೇಂದ್ರ ಬಿಂದು ನೀಡಿ ಅದನ್ನು ಪ್ರಸ್ತುತ ಸಂದರ್ಭಕ್ಕೆ ಅನುಗುಣವಾಗುವ ರೀತಿ ವ್ಯಾಖ್ಯಾನಿಸುವ ಅವಶ್ಯಕತೆ ಇದೆ ಎಂದು ಸರ್ಕಾರವು ಅಭಿಪ್ರಾಯಪಟ್ಟಿತು. ಅದರಂತೆ ರಾಜ್ಯದ ಸರ್ಕಾರವು ಮಾಹಿತಿ ಸಹಸ್ರಮಾನದ ಮಾಹಿತಿ ತಂತ್ರಜ್ಞಾನ ನೀತಿ ಎಂಬ ಒಂದು ಹೊಸ ನೀತಿಯನ್ನು ಕೆಳಕಂಡ ಧ್ಯೇಯಗಳನ್ನು ಗಮನದಲ್ಲಿ ಇಟ್ಟುಕೊಂಡು ತಯಾರಿಸಿದೆ ಎಂದು ಈ ಸದನಕ್ಕೆ ತಿಳಿಸಲು ನನಗೆ ಸಂತೋಷವಾಗಿದೆ.

(1) ಬಡತನ ನಿರ್ಮೂಲನೆ ಮತ್ತು ಮಹಿಳೆಯರಿಗೆ ಅಧಿಕಾರ ನೀಡುವಿಕೆ ಕುರಿತಂತೆ ಕರ್ನಾಟಕ ಸರ್ಕಾರದ ಸಮಗ್ರ ಗುರಿಯಲ್ಲಿ ಮಾಹಿತಿ ತಂತ್ರಜ್ಞಾನ ಶಕ್ತಿಯನ್ನು ಉಪಯೋಗಿಸಿಕೊಳ್ಳುವುದು.

(2) ಬಹುಪಾಲು ವಿದ್ಯಾವಂತ ಯುವಕರನ್ನು ಮಾಹಿತಿ ತಂತ್ರಜ್ಞಾನ ಕೈಗಾರಿಕೆಯಲ್ಲಿ ವಿಲೀನಗೊಳಿಸುವ ಮೂಲಕ ನಿರುದ್ಯೋಗವನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡುವುದು.

(3) ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡ ಬಳಕೆಯನ್ನು ಪ್ರೋತ್ಸಾಹಿಸುವುದು.

(4) "e-governance"ಅನ್ನು ಒಂದು ಸಾಧನವನ್ನಾಗಿ ಉಪಯೋಗಿಸಿಕೊಂಡು ಪ್ರಜೆಗಳಿಗೆ ಸ್ಪಂದಿಸುವ ಹಾಗೂ ಸಕ್ರಿಯ ಆಡಳಿತವನ್ನು ನೀಡುವುದು.

(5) ಕರ್ನಾಟಕ ವಿಕಸನ ಯಂತ್ರ [Incubation Engine]ವನ್ನು ಬಿಡುಗಡೆ ಮಾಡುವುದು.

(6) ಆಂಗ್ಲಭಾಷೆ ಬಳಕೆ ಇಲ್ಲದ ದೇಶಗಳ ಜೊತೆ ವ್ಯವಹಾರವನ್ನು ಉತ್ತೇಜಿಸುವುದು.

(7) ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಂಗಳೂರು ಮತ್ತು ಕರ್ನಾಟಕ ಎರಡೂ ಉತ್ತಮೋತ್ತಮ ಸ್ಥಿತಿಯಲ್ಲಿ ಇರುವುದನ್ನು ಕಾಪಾಡುವುದು.

4. ಸರ್ಕಾರವು ಈ ಹೊಸ ನೀತಿಯಲ್ಲಿ ಕೈಗೊಳ್ಳಲಿರುವ ಅನೇಕ ಕ್ರಮಗಳು ರಾಜ್ಯಕ್ಕೆ

ಅಪಾರವಾಗಿ ಅದರಲ್ಲೂ ಸಾಮಾನ್ಯ ಜನರಿಗೆ ಸಹಾಯಕಾರಿಯಾಗುತ್ತದೆ ಎಂಬುದಾಗಿ ನನಗೆ ಖಾತ್ರಿಯಾಗಿದೆ. ಸರ್ಕಾರವು ಔಪಚಾರಿಕವಾಗಿ ಈ ಹೊಸ ನೀತಿಯನ್ನು ಶನಿವಾರ ದಿನಾಂಕ 18-03-2000ದಂದು ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿನ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಘೋಷಿಸಲಿದೆ. ಈ ಸಮರಂಭಕ್ಕೆ ಶಾಸಕಾಂಗದ ಮಾನ್ಯ ಎಲ್ಲಾ ಸದಸ್ಯರನ್ನು ನಾನು ಸ್ವಾಗತಿಸುತ್ತೇನೆ.''

ಅಧ್ಯಕ್ಷರು: ಹೇಳಿಕೆಯನ್ನು ಮಂಡಿಸಲಾಗಿದೆ. ಈಗ ಸದನವನ್ನು ಮುಂದೂಡಿ ಮತ್ತೆ ಸದನ ದಿನಾಂಕ 20ನೇ ಮಾರ್ಚ್, 2000ರಂದು, ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 20ನೇ ಮಾರ್ಚ್ ಮಾಹೆ 2000ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)